ಕೃಷಿ ಮೇಳ ವೀಕ್ಷಣೆ



ವಿಟ್ಲ ಪ್ರಾದೇಶಿಕ ಕ್ಷೇತ್ರದಲ್ಲಿ ಜರುಗಿದ ಕೃಷಿಮೇಳದಲ್ಲಿ ಒಟ್ಟು 36 ವಿವಿಧ ಪ್ರದರ್ಶನ ಮಳಿಗೆಯನ್ನು ವೀಕ್ಷಿಸಿದ ಕೇಂದ್ರ ಕಾನೂನು ಸಚಿವ ಡಿ.ವಿ.ಸದಾನಂದ ಗೌಡ

### ವಿಟ್ಲದ ಕೃಷಿ ಮೇಳದಲ್ಲಿದ್ದುವು 36 ಪ್ರದರ್ಶನ ಮಳಿಗೆಗಳು

# ಗಮನ ಸೆಳೆದ ಮರ ಹತ್ತುವ ಯಂತ್ರ

ವಿಟ್ಲ: ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯ ವಿಟ್ಲ ಪ್ರಾದೇಶಿಕ ಕ್ಷೇತ್ರ ಹಾಗೂ ಅಡಿಕೆ ಮತ್ತು ಸಾಂಬಾರು ಬೆಳೆಗಳ ಅಭಿವೃದ್ಧಿ ನಿರ್ದೇಶನಾಲಯ ಕಲ್ಲಿಕೋಟೆ ಇವರ ಜಂಟಿ ಆಶ್ರಯದಲ್ಲಿ ಶನಿವಾರ ವಿಟ್ಲ ಪ್ರಾದೇಶಿಕ ಕ್ಷೇತ್ರದಲ್ಲಿ ಜರುಗಿದ ಕೃಷಿಮೇಳದಲ್ಲಿ ಒಟ್ಟು 36 ವಿವಿಧ ಪ್ರದರ್ಶನ ಮಳಿಗೆಗಳಿದ್ದವು.

ಕೇಂದ್ರ ಕಾನೂನು ಸಚಿವ ಡಿ.ವಿ.ಸದಾನಂದ ಗೌಡ ಉದ್ಘಾಟಿಸಿದರು. ಈ ಪೈಕಿ ಶಿವಮೊಗ್ಗದ ಹೇರ್ಲೆ ಟೆಕ್ನಿಕಲ್ ರಿಸರ್ಚ್ ವರ್ಕ್ಸ್‌ನ ಅಡಿಕೆ ಮರ ಹತ್ತುವ ಯಂತ್ರದ ಪ್ರಾತ್ಯಕ್ಷಿಕೆ ಮತ್ತು ಮಾರಾಟ, ವಾರಣಾಸಿ ರೀಸರ್ಚ್ ಫೌಂಡೇಶನ್ , ಕಾಸರಗೋಡು ಕೃಷಿ ವಿಜ್ಞಾನ ಕೇಂದ್ರದ ವಿವಿಧ ಉತ್ಪನ್ನಗಳು, ಅಡಿಕೆ ಪತ್ರಿಕೆ, ಶಿವಮೊಗ್ಗದ ಕೃಷಿ ತೋಟಗಾರಿಕಾ ವಿವಿಯ ವಿವಿಧ ಅಡಿಕೆ ತಳಿಗಳು, ಉಳ್ಳಾಲ ವಿಜ್ಞಾನ ಕೇಂದ್ರದ ಗೇರು ತಳಿಗಳು, ದ.ಕ. ಜಿ.ಪಂ. ತೋಟಗಾರಿಕಾ ಇಲಾಖೆಯ ವಿವಿಧ ಅಡಿಕೆ ತಳಿಗಳು, ಸಾಂಬಾರು ಮತ್ತು ವಿವಿಧ ಬೆಳೆಗಳ ಕೇಂದ್ರ, ಉಪ್ಪಂಗಳ ಮಡಿಕೇರಿ ಇದರ ಉತ್ಪನ್ನಗಳು, ಶಿರಸಿಯ ತೋಟಗಾರಿಕಾ ಕೇಂದ್ರದ ವಿವಿಧ ಅಡಿಕೆ ತಳಿಗಳು, ಮಂಗಳೂರು ಕ್ಯಾಂಪ್ಕೋ ಉತ್ಪನ್ನಗಳ ಮಳಿಗೆಗಳು ವಿಶೇಷ ಆಕರ್ಷಣೆ

> ದ.ಕ. ಜಿ.ಪಂ. ತೋಟಗಾರಿಕಾ ಇಲಾಖೆಯ ವಿವಿಧ ಅಡಿಕೆ ತಳಿಗಳು, ಸಾಂಬಾರು ಮತ್ತು ವಿವಿಧ ಬೆಳೆಗಳ ಕೇಂದ್ರ, ಉಪ್ಪಂಗಳ ಮಡಿಕೇರಿ ಇದರ ಉತ್ಪನ್ನಗಳು, ಶಿರಸಿಯ ತೋಟಗಾರಿಕಾ ಕೇಂದ್ರದ ವಿವಿಧ ಅಡಿಕೆ ತಳಿಗಳು, ಮಂಗಳೂರು ಕ್ಯಾಂಪ್ಕೋ ಉತ್ಪನ್ನಗಳ ಮಳಿಗೆಗಳು ವಿಶೇಷ ಆಕರ್ಷಣೆ ಪಡೆದವು.

ಪಡೆದವು. ರೈತರು ಬೆಳೆದ ಕೃಷ್ಯುತ್ಪನ್ನಗಳ ಪ್ರದರ್ಶನವೂ ಗಮನ ಸೆಳೆದುವು.

ಈ ಮಳಿಗೆಗಳ ಪೈಕಿ ಖಾಸಗಿ ಮಳಿಗೆಗಳಾದ ವಾರಣಾಸಿ ರೀಸರ್ಚ್ ಫೌಂಡೇಶನ್, ಮಂಗಳೂರು ಕ್ಯಾಂಪ್ಕೋ ಮಳಿಗೆ ಮತ್ತು ಅಡಿಕೆ ಪತ್ರಿಕೆ ಪುತ್ತೂರು, ಸರಕಾರಿ ಮಳಿಗೆಗಳಾದ ಕಾಸರಗೋಡು ಕೃಷಿ ವಿಜ್ಞಾನ ಕೇಂದ್ರದ ಮಳಿಗೆ, ಅಪ್ಪಂಗಳದ ಐ.ಐ.ಎಸ್.ಆರ್. ಕೇಂದ್ರ ಮತ್ತು ಶಿರಸಿ ತೋಟಗಾರಿಕಾ ಸಂಶೋಧನಾ ಕೇಂದ್ರದ ಮಳಿಗೆ ಬಹುಮಾನ ಪಡೆದಿವೆ.

ರೈತರು ತಂದ ಕೃಷ್ಯುತ್ಪನ್ನಗಳ ಪ್ರದರ್ಶನದಲ್ಲಿ-ಕೇರಳದ ಕೊಟ್ಟಾಯಂನ ಟೋಮ್ ಸಿ ಎಂಟನಿ ಮತ್ತು ಬಂಟ್ವಾಳದ ಒಬಯ್ಯ ಬಹುಮಾನ ಪಡೆದಿದ್ದಾರೆ.